# ನವಿಲುಗನ್ನಡಿ

- ಫೆಬ್ರುವರಿ ಸಂಚಿಕೆ ಸುಂದರ ಮುಖಪುಟದೊಂದಿಗೆ ಆಕರ್ಷಿಸಿತು. ರಹಮತ್ ತರೀಕೆರೆ ಅವರ 'ಕನ್ನಡಕ್ಕೊಬ್ಬರೆ ಕಾಮರೂಪಿ' (ಕರ್ನಾಟಕದೊಳಗಿದ್ದ ಅಸ್ಸಾಮಿನ ಆಸಾಮಿ) ಸಂಚಿಕೆಗೆ ಕಳಸಪ್ರಾಯ. ಕಲೀಮ್ ಉಲ್ಲಾ ಅವರ 'ವಜ್ರದ ಕಣ್ಣುಗಳ ಕಾಡುಪಾಪ' ನಮ್ಮ ಕಣ್ಣೆದುರೇ ನಡೆದು ಹೋದಂತೆ ಭಾಸವಾಯಿತು.


**ಬಿ.ಆರ್. ಅಣ್ಣಾಸಾಗರ, ಸೇಡಂ,**
**ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ.**

- ಹಿಂದೂಸ್ತಾನಿ ಗಾಯಕಿ ಅಶ್ವಿನಿ ಭಿಡೆ ದೇಶಪಾಂಡೆ ಅವರೊಂದಿಗಿನ ಮಾತು–ಕತೆ (ಸಂದರ್ಶನ: ಕೋಡಿಬೆಟ್ಟು ರಾಜಲಕ್ಷ್ಮಿ) ಆಪ್ತವಾಗಿತ್ತು. 'ಅಧ್ಯಾತ್ಮಕ್ಕೆ ಬೇಕಿರುವುದು ಶ್ರದ್ಧೆಯಷ್ಟೇ... ಧರ್ಮ, ಭಕ್ತಿಯ ಹೆಸರಲ್ಲ' ಎನ್ನುವ ಅವರ ದೃಢ ನಿಲುವಿನ ಸಂದರ್ಶನ ಕಾಯಕದ ಬಗೆಗಿನ ಗೌರವವನ್ನು ಇಮ್ಮಡಿಗೊಳಿಸುವಂತಿದೆ. ಎಲ್ಲವನ್ನೂ ಡಿಜಿಟಲ್ ಮಾಧ್ಯಮದಿಂದ ಪಡೆಯಲು ಹೊರಟಿರುವ ನಮ್ಮ ಯುವಪೀಳಿಗೆಗೆ ಅವರ ಮಾತುಗಳು ಪಾಠದಂತಿವೆ.

**ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ,**
**ಶಂಕರನಾರಾಯಣ ಭಟ್, ಹೊನ್ನಾವರ**
**ಸುಮನಾ, ಬೆಂಗಳೂರು**
**ಮಲ್ಲಿಕಾರ್ಜುನ ಸುರಧೇನುಪುರ**

- ಎಸ್.ಜಿ. ಸಿದ್ಧರಾಮಯ್ಯ ಅವರ 'ಅಪ್ಪ' ಕವಿತೆಯ 'ಪಡೆವುದಕ್ಕಿಂತ ಕೊಡುವುದರಲ್ಲೇ ಕರ್ಣತೃಪ್ತ' ಸಾಲು ಹೃದಯಕ್ಕಪ್ಪಳಿಸಿತು. 'ಪುಷ್ಯ ಮಾಸದ ರಾತ್ರಿ' (ಮೂಲ: ಪ್ರೇಮಚಂದ್, ಕನ್ನಡಕ್ಕೆ: ಡಾ. ಆರ್. ಲಕ್ಷ್ಮೀನಾರಾಯಣ) ಕಥೆ ಮನೋಜ್ಞವಾಗಿತ್ತು.

**ತಾರಾ ಸುದೇಶ್, ಕಲಬುರಗಿ**




- ಪ್ರಜ್ಞಾ ಮತ್ತೀಹಳ್ಳಿ ಅವರ ಪ್ರಬಂಧ 'ದಿನಕರನ ಕೊನೆಯ ಸಿಪ್' ಚೆನ್ನಾಗಿ ಮೂಡಿಬಂದಿದೆ. ಸಂಜೆಯ ಬಾನಿಗೆ ಹಲವು ರಂಗಿನ ಚಿತ್ರಗಳನ್ನು ಸುಂದರವಾಗಿ ಪೋಣಿಸಿದ್ದು, ಪದ್ಯಗಂಧಿ ಶೈಲಿಯ ಗದ್ಯಲಯ ಓದುಗನ ಮನಸ್ಸನ್ನು ರಮಿಸುತ್ತದೆ.

**ಪಿ.ಶ್ರೀಧರ, ಲಕಮನಹಳ್ಳಿ,**
**ಶ್ಯಾಮಲ ಎಚ್.ಎಸ್., ಬೆಂಗಳೂರು**

- ಸಂದರ್ಶನ ಔಚಿತ್ಯಪೂರ್ಣವಾಗಿದೆ. ಪ್ರಬಂಧಗಳೂ ಸ್ವಾರಸ್ಯಕರವಾಗಿವೆ. ವಸುಮತಿ ಉಡುಪ ಅವರ 'ನಿಮ್ಮ ಒಳ್ಳೇದಕ್ಕೇ' ಕಥೆ ಚೆನ್ನಾಗಿ ಮೂಡಿಬಂದಿದೆ.

**ಪಿ.ಎಚ್. ಪಾಟೀಲ್, ರಾಣೆಬೆನ್ನೂರ,**
**ಶಾಂತಕುಮಾರ್, ಸರ್ಜಾಪುರ**

- ಪ್ರೇಮಕುಮಾರ್ ಹರಿಯಬ್ಬೆ ಅವರ 'ಮುಖ ಕಳೆದುಕೊಂಡವನು' ಕಥೆ ಆಧುನಿಕ ಮನುಷ್ಯನ ಜೀವನ ಶೈಲಿಗೆ ಹಿಡಿದ ಕನ್ನಡಿಯಂತಿದೆ. ನಿರೂಪಣಾ ತಂತ್ರಗಾರಿಕೆ ಚುರುಕಿನಿಂದ ಕೂಡಿದ್ದು, ಕುತೂಹಲ ಹುಟ್ಟಿಸುತ್ತದೆ.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**

- ಲಿಂಗರಾಜ ಸೊಟ್ಟಪ್ಪನವರ 'ವಖಾರ' ಕಥೆ ಒಂದು ಅನುಭವ ಕಥನದಂತೆ ಮೂಡಿಬಂದಿದೆ. ಅವರ ನಿರೂಪಣಾ ಶೈಲಿ ಇಷ್ಟವಾಯಿತು.

**ಪ್ರಕಾಶ್ ಮಲ್ಕಿಒಡೆಯರ್, ಹೂವಿನ ಹಡಗಲಿ**